# ಕರ್ನಾಟಕದ ಶಿವಶರಣರು ಮತ್ತು ಶ್ರೀರಾಮಕೃಷ್ಣ ಪರಮಹಂಸರು – ಕೆಲವು ಸಾಮ್ಯಗಳು – ೨

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಡಾ. ಜಿ.ಎಸ್. ಶಿವರುದ್ರಪ್ಪ

ಸಾಧನೆ ಅನ್ನುವುದು ತನ್ನೊಳಗಿರುವ ದೈವತ್ವದ ಸಾಕ್ಷಾತ್ಕಾರದ ಪ್ರಯತ್ನ. ತನ್ನಲ್ಲಿ ದೈವತ್ವ ಇದೆ ಎಂದು ತಿಳಿದಿರುವುದು ಬೇರೆ; ಅದನ್ನು ಕುರಿತು ವಿಚಾರ ಮಾಡುವುದು ಬೇರೆ: ಅದನ್ನು ಸ್ವಯಂ ಅನುಭವಕ್ಕೆ ತಂದುಕೊಳ್ಳುವುದೇ ಬೇರೆ. ರಾಮಕೃಷ್ಣರು ಹೇಳುತ್ತಾರೆ: "ನಿನ್ನ ಅಂತರ್ಯದಲ್ಲಿ ಚಿನ್ನದ ಗಟ್ಟಿ ಇದೆ. ನಿನಗೆ ಗೊತ್ತಾಗಿಲ್ಲ. ಅದರ ಮೇಲೆ ಮಣ್ಣು ಮುಚ್ಚಿಕೊಂಡಿದೆ" (ವ.ವೇ. ಪು.೬೩ ಪೂ.). ಇದೇ ಮಾತನ್ನು ಅಲ್ಲಮಪ್ರಭುಗಳು, ಆ ಪರತತ್ತ್ವ 'ನೆಲದ ಮರೆಯ ನಿಧಾನದಂತೆ' (ವ.೪), ಅಂದರೆ ನೆಲದಲ್ಲಿ ಹೂತಿಟ್ಟಿರುವ ನಿಧಿಯಂತೆ ಅನ್ನುತ್ತಾರೆ. "ಕಟ್ಟಿಗೆಯಲ್ಲಿ ಬೆಂಕಿ ನಿಶ್ಚಯವಾಗಿ ಇದೆ ಎಂಬ ನಂಬಿಕೆ ಒಂದು: ಕಡ್ಡಿಯಿಂದ ಬೆಂಕಿ ಉತ್ಪನ್ನ ಮಾಡಿ, ಊಟ ಮಾಡಿ ಶಾಂತಿ ಅಥವಾ ತೃಪ್ತಿಯನ್ನು ಪಡೆಯೋದು ಇನ್ನೊಂದು; ಇವೆರಡಕ್ಕೂ ಅಜಗಜಾಂತರ ವ್ಯತ್ಯಾಸ" (ವ.ವೇ. ಪು.೪೪, ಉತ್ತ.) ವಚನಕಾರರು ಇದೇ ಮಾತನ್ನು ಮತ್ತೆ ಮತ್ತೆ ಹೇಳುತ್ತಾರೆ, 'ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ' (ವ. ೯೦೭) ಎಂದು ಜೇಡರ ದಾಸಿಮಯ್ಯ ಹೇಳುವ ಮಾತಿನಲ್ಲಿ ಮರದೊಳಗೆ ಬೆಂಕಿ ಇದೆ, ನಿಜ; ಆದರೆ ಅದನ್ನು ಮಂಥನ ಕ್ರಿಯೆಯಿಂದ ಕಂಡುಕೊಳ್ಳಬೇಕು. ಅಂತರಂಗದಲ್ಲೇ ಇರುವ ಈ ಅನುಭವ ಕಿರುಮನೆಯೊಳಗೆ ರತ್ನವನ್ನಿರಿಸಿ ಬೀಗಹಾಕಿದ ಹಾಗೆ. "ಕಿರುಮನೆಯೊಳಗಿರೋ ರತ್ನ ನೋಡಬೇಕಾದರೆ, ಬೀಗದಕ್ಕೈ ವಿಚಾರಿಸಿ ತಂದು ಬಾಗಿಲು ತೆರೆಯಬೇಕಾಗುತ್ತದೆ." (ವ.ವೇ.ಪು.೯೯.ಪೂ.) ಎಂದು ಹೇಳುತ್ತಾರೆ ರಾಮಕೃಷ್ಣರು. ಶಿವಶರಣರಲ್ಲಿ ಒಬ್ಬನಾದ ಬೊಕ್ಕಸದ ಚಿಕ್ಕಣ್ಣ – ಅವನ ಹೆಸರೇ ಸೂಚಿಸುವಂತೆ ಬೊಕ್ಕಸದ (ರಾಜನ ಭಂಡಾರದ) ಉಸ್ತುವಾರಿಯಲ್ಲಿದ್ದಾತ – ಹೇಳುತ್ತಾನೆ: 'ಅಂಗದ ಬೊಕ್ಕಸ ಮಂದಿರಕ್ಕೆ ಚಿದ್ಘನಲಿಂಗವೆಂಬುದೊಂದು ಬೀಗ. ಎಸಳ ತೆಗೆವುದಕ್ಕೆ ಬೀಗದ ಕೈಯ್ಯ ಕಾಣೆ' (ವ.೧) ಎನ್ನುವ ವಚನ. ಆ ದೈವೀ ಅನುಭವ ಬೊಕ್ಕಸದೊಳಗಣ ಸಂಪತ್ತಿನಂತೆ; ಆದರೆ ಹೇಗೋ ಮಾಡಿ ಅದರ ಬೀಗದ ಕೈಯನ್ನು ಪಡೆದುಕೊಳ್ಳಬೇಕು ಅನ್ನುವುದನ್ನು ತಿಳಿಸುತ್ತದೆ.

ಈ ನಿರಂತರ ಪ್ರಯತ್ನ ಅಥವಾ ಸಾಧನೆಯ ಮೊದಲ ಉದ್ದೇಶ, ಭಗವತ್ಪರವಾದ ಅನುರಾಗವನ್ನು ಸ್ಥಾಯಿಯನ್ನಾಗಿ ಮಾಡಿಕೊಳ್ಳುವುದೇ ಆಗಿದೆ. ಅದಕ್ಕಾಗಿಯೆ ನಿರಂತರ ಜಪ–ತಪ–ಪೂಜೆ ಪ್ರಾರ್ಥನೆ ಮುಂತಾದ ಕರ್ಮಗಳೆಲ್ಲ. ತತ್ಪರಿಣಾಮವಾಗಿ ಯಾವಾಗ ಭಕ್ತನ ಹೃದಯದಲ್ಲಿ ಭಗವತ್ಪರವಾದ ಅನುರಾಗ ನೆಲೆನಿಲ್ಲುವಂತಾಗುವುದೋ ಆಗ ಈ ಕರ್ಮಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಾರೆ: "ಗಾಳಿ ಬೀಸದವರೆಗೆ ಮಾತ್ರವೇ ಬೀಸಣಿಗೆಯ ಅವಶ್ಯಕತೆ, ತೆಂಕಣ ಗಾಳಿ ಬೀಸತೊಡಗಿತೆಂದರೆ ಬೀಸಣಿಗೆಯನ್ನು ಕೆಳಕ್ಕೆ ಇಟ್ಟುಬಿಡಬಹುದು. ಬಳಿಕ ಬೀಸಣಿಗೆಯ ಅವಶ್ಯಕತೆ ಏನಿದೆ?" (ವ.ವೇ. ಪು. ೭೨ ಪೂ.) ಇದೇ ಮಾತನ್ನು ವಚನಕಾರ ಚಂದಿಮರಸ ಹೇಳುವುದು ಹೀಗೆ: 'ಗಾಳಿ ಬೀಸುವಲ್ಲಿ ಕೇಳೆಲವೊ, ಬೀಸಣಿಗೆಯ ಉಸಿರೆಂತು ಮರೆವುದು ಹೇಳಾ ಮರುಳೆ?' (ವ. ೫೯೮: ಸಂಕೀರ್ಣ ವಚನಗಳು). ವಚನಕಾರರ ಹಾಗೂ ರಾಮಕೃಷ್ಣರ ಈ ವಿಚಾರಸಾಮ್ಯ ಗಮನಿಸತಕ್ಕದ್ದಾಗಿದೆ.

ದೈವೀ ಅನುಭವ ಕೇವಲ ವಿಚಾರಕ್ಕೆ ಹೇಗೆ ದಕ್ಕುವುದಿಲ್ಲವೋ ಹಾಗೆಯೇ ಅದು ಪುಸ್ತಕಪಾಂಡಿತ್ಯ ಮತ್ತು ಶಾಸ್ತ್ರಜ್ಞಾನಗಳಿಗೆ ಅತೀತವಾದದ್ದು ಎನ್ನುವ ಸಂಗತಿ ಶಿವಶರಣರಿಗೂ ರಾಮಕೃಷ್ಣರಿಗೂ ಸಮಾನವಾದ ಅಂಶವಾಗಿದೆ. ರಾಮಕೃಷ್ಣರು ನಿರರ್ಗಳವಾಗಿ ಭಗವದ್‌ವಿಷಯಕವಾದ ಮಾತುಗಳನ್ನಾಡುವುದನ್ನು ಮೊದಲಿಗೆ ಕಂಡ ಮಾಸ್ಟರ್ ಮಹಾಶಯ, ಅವರು ಬಹಳವಾಗಿ ಪುಸ್ತಕ–ಗಿಸ್ತಕ ಓದಿಕೊಂಡಿರಬಹುದೆಂದು ತರ್ಕಿಸುತ್ತಾನೆ. ಆದರೆ ಅವನ ತರ್ಕ ಸುಳ್ಳೆಂದು ಅನಂತರ ಗೊತ್ತಾಗುತ್ತದೆ. ಹಾಗೆ ನೋಡಿದರೆ ರಾಮಕೃಷ್ಣರು ಒಂದರ್ಥದಲ್ಲಿ ಪುಸ್ತಕ ಜ್ಞಾನದ ವಿದ್ಯೆಗೆ ದೂರವಾದವರು. ಒಂದು ಹಂತದಲ್ಲಿ ಅವರು ಅದನ್ನು ನಿರಾಕರಿಸುತ್ತಾರೆ ಕೂಡಾ. ಆದರೆ, ಯಾವುದನ್ನು ಅರಿತರೆ ಎಲ್ಲವನ್ನೂ ಅರಿತಂತಾಗುತ್ತದೆಯೋ, ಆ ನಿಜವಾದ ನಿಧಿಯನ್ನೇ ನಿರಂತರವಾದ ಸಾಧನೆಯಿಂದ ಪಡೆದುಕೊಂಡವರು ಅವರು. ಅವರು ಮತ್ತೆ ಮತ್ತೆ ಹೇಳುತ್ತಾರೆ: "ಪಾಂಡಿತ್ಯದಿಂದ ಭಗವಂತನನ್ನು ಪಡೆಯಲಾಗುವುದಿಲ್ಲ. ಆತ ವೇದ ಪುರಾಣ ತಂತ್ರ ಈ ಎಲ್ಲ ಶಾಸ್ತ್ರಗಳಿಗೂ ಅತೀತ" (ವ.ವೇ.ಪು. ೨೦೦ ಉತ್ತ.). ಆತನನ್ನು ಅರಿತುಕೊಳ್ಳುವ ಬದಲು ಈ ಶುಷ್ಕ ಪಾಂಡಿತ್ಯ ಸಂಪಾದನೆಗಾಗಿ ಇರುವ ಕಾಲವನ್ನು ವ್ಯರ್ಥ ಮಾಡಬಾರದು. "ನಾನು ತೋಟಕ್ಕೆ ಬಂದಿರುವುದು ಮಾವಿನ ಹಣ್ಣು ತಿನ್ನುವುದಕ್ಕೆ ಮರಗಳೆಷ್ಟಿವೆ, ಕೊಂಬೆಗಳೆಷ್ಟಿವೆ, ಎಷ್ಟೊಂದು ಕೋಟಿ ಎಲೆಗಳಿವೆ, ಇವುಗಳ ಲೆಕ್ಕಾಚಾರ ನನಗೇಕೆ?" (ವ.ವೇ. ಪು. ೧೬೩ ಪ್ರ : ಪು. ೨೫೧ ಉತ್ತ.) ಎನ್ನುವುದೇ ರಾಮಕೃಷ್ಣರ ನಿಲುವು. ಶಿವಶರಣರೆಲ್ಲರೂ ಒಕ್ಕೊರಲಿನಿಂದ ಇದೇ ಅಭಿಪ್ರಾಯವನ್ನು ಹೇಳಿದ್ದಾರೆ. 'ವೇದಂಗಳ ಹಿಂದೆ ಹರಿಯದಿರು ಹರಿಯದಿರು, ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು,

ಪುರಾಣಂಗಳ ಹಿಂದೆ ಬಳಸದಿರು ಬಳಸದಿರು ಬಳಸದಿರು..' (ವ. ೨೦೭) ಎಂದು ಆದಯ್ಯನೆಂಬ ವಚನಕಾರನು ಹೇಳಿದರೆ, 'ವೇದಶಾಸ್ತ್ರ ಪುರಾಣ ಆಗಮಂಗಳೆಂಬ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿರೋ (ವ. ೨೪೨) ಎಂದು ಅಕ್ಕಮಹಾದೇವಿ ಹೇಳುತ್ತಾಳೆ. ಬಸವಣ್ಣನವರ ಪ್ರಕಾರ 'ವೇದವನೋದಿದರೇನು, ಶಾಸ್ತ್ರವ ಕೇಳಿದರೇನು?' (ವ. ೫೮೯) ಅದರಿಂದೇನೂ ಪ್ರಯೋಜನವಿಲ್ಲ, ಯಾಕೆಂದರೆ:

**ವೇದ ವೇಧಿಸಲರಿಯದೆ ಅಭೇದ್ಯ ಲಿಂಗವೆಂದು ನಡನಡುಗಿತ್ತು**
**ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯ ಲಿಂಗವೆಂದು ಸಾರುತೈದಾವೆ**
**ತರ್ಕ ತರ್ಕಿಸಲರಿಯದೆ ಅತರ್ಕ್ಯ ಲಿಂಗವೆಂದು ಮನಂಗೊಳ್ಳವು**
**ಆಗಮ ಅಗಮ್ಯ ಲಿಂಗವೆಂದು ಗಮನಿಸಲರಿಯದೆ ಹೋದವು**
**(ಬ. ವ. ೯೫೨)**

ಶರಣರು ಹೇಳುವ ಲಿಂಗ ಅಥವಾ ಪರಬ್ರಹ್ಮವು ವೇದಶಾಸ್ತ್ರಾದಿಗಳಿಂದ ಸಾಧಿಸಲಸಾಧ್ಯವಾದದ್ದು; ಅದು ಸಾಧ್ಯವಾಗುವುದು ಕೇವಲ ಭಕ್ತಿಗೆ ಮಾತ್ರ, ಶ್ರೀರಾಮಕೃಷ್ಣರು ಹೇಳುತ್ತಾರೆ: "ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡೋಕಾಗೋದಿಲ್ಲ. ಎಲ್ಲವೂ ಉಚ್ಛಿಷ್ಟವಾಗಿ ಹೋಗಿವೆ – ವೇದ, ಪುರಾಣ, ತಂತ್ರ, ಷಡ್ದರ್ಶನ– ಇವೆಲ್ಲಾ ಬಾಯಿಂದ ಹೊರಹೊಮ್ಮಿರುವುದರಿಂದ. ನಾಲಗೆ ಉಚ್ಚರಿಸಿರುವುದರಿಂದ ಉಚ್ಛಿಷ್ಟವಾಗಿವೆ ಅಥವಾ ಎಂಜಲಾಗಿವೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಅಂದರೆ ಏನು ಅನ್ನುವುದನ್ನು ಯಾರಿಗೂ ಇದುವರೆಗೂ ವರ್ಣನೆ ಮಾಡಲಾಗಿಲ್ಲ"(ವ.ವೇ.ಪು.೫೦). ಆಶ್ಚರ್ಯದ ಸಂಗತಿ ಎಂದರೆ ಮಹಾ ಅನುಭಾವಿ ಅಲ್ಲಮಪ್ರಭು ಗುಹೇಶ್ವರನೆಂಬ ಲಿಂಗವನ್ನು ಕುರಿತು ಇದೇ ಪರಿಭಾಷೆಯಲ್ಲಿ ಮಾತನಾಡುತ್ತಾರೆ: 'ಶಬ್ದವೆಂಬೆನೆ? ಶ್ರೋತ್ರದೆಂಜಲು; ಸ್ಪರ್ಶವೆಂಬೆನೆ? ತ್ವಕ್ಕಿನೆಂಜಲು; ರೂಪೆಂಬನೆ? ನೇತ್ರದೆಂಜಲು; ರುಚಿಯೆಂಬೆನೆ? ಜಿಹ್ವೆಯೆಂಜಲು; ಪರಿಮಳವೆಂಬೆನೆ? ಘ್ರಾಣದೆಂಜಲು; ನಾನೆಂಬೆನೆ? ಅರಿವಿನೆಂಜಲು; ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು' (ವ. ೫೬೩). ರಾಮಕೃಷ್ಣರ ಬ್ರಹ್ಮದ ವರ್ಣನೆಗಿಂತ ಈ ಮಾತು ಹೆಚ್ಚು ವ್ಯಾಪಕವಾಗಿದೆ. ರಾಮಕೃಷ್ಣರ ಮಾತು ವೇದಪುರಾಣಾಗಮ ಶಾಸ್ತ್ರಗಳು ಎಂಜಲಾಗಿರುವ ಪರಿಯನ್ನು ಪ್ರಸ್ತಾಪಿಸಿದರೆ, ಅಲ್ಲಮನದು, ಶಬ್ದ ಸ್ಪರ್ಶ ರೂಪ ಗಂಧಾದಿ ಪಂಚೇಂದ್ರಿಯ ಪ್ರಪಂಚದ ಅನುಭವಗಳೆಲ್ಲವೂ ಗ್ರಹಿಕೆಗೆ ವರ್ಣನೆಗೆ ಸಿಕ್ಕುವುದರಿಂದ ಅವೆಲ್ಲವೂ ಎಂಜಲಾಗಿವೆ, ಈ ಪ್ರಾಪಂಚಿಕ ವಾದ ಹಾಗೂ ಎಂಜಲಾದ ಅನುಭವಗಳಿಗೆ ಅತೀತವಾದದ್ದು **ಬೆಳಗಿನೊಳಗಿನ ಬೆಳಗಾದ ಆ ಗುಹೇಶ್ವರ ಲಿಂಗವೆ–** ಎಂಬುದನ್ನು ಮಂಡಿಸುವ ಕ್ರಮವು ವಿಶೇಷ ರೀತಿಯದಾಗಿದೆ. ನಿಜವಾದ ಅನುಭಾವದ ಮೂಲಕ ಸಾಕ್ಷಾತ್ಕರಿಸಿಕೊಂಡ ಈ ದೈವೀ ಅನುಭವವನ್ನು ಮಾತಿನಿಂದ ವರ್ಣಿಸಲು ಸಾಧ್ಯ ವಿಲ್ಲ. "ಆ ಅವಸ್ಥೆಯಲ್ಲಿ ವಿಚಾರ ಪೂರ್ತಿ ನಿಂತುಹೋಗುತ್ತದೆ. ಮನುಷ್ಯ ಮೂಕನಾಗಿ ಬಿಡುತ್ತಾನೆ" (ವ.ವೇಪು.೫೧ ಪೂ.) ಎನ್ನುತ್ತಾರೆ ರಾಮಕೃಷ್ಣರು. "ಮಾತಿನ ಹಂಗೇಕೆ ಮನವೇಕಾಂತ ದಲ್ಲಿ ನಿಂದ ಬಳಿಕ" (ವ. ೧೮೯) ಎನ್ನುತ್ತಾಳೆ ನೀಲಮ್ಮನೆಂಬ ಶಿವಶರಣೆ. ಶಿವಶರಣರು ಈ ಸ್ಥಿತಿಯನ್ನು ಬಯಲು ಅಥವಾ ಬೆಳಗು ಎಂಬ ಪರಿಭಾಷೆಯ ಮೂಲಕ ಸೂಚಿಸುತ್ತಾರೆ. ಈ 'ಐಕ್ಯ' ಸ್ಥಲದ ಅನುಭವಗಳನ್ನು ಅಲ್ಲಮಪ್ರಭುವಿನ ಹಾಗೂ ಅಕ್ಕಮಹಾದೇವಿಯ ಅನೇಕ ವಚನಗಳು ವರ್ಣಿಸುತ್ತವೆ. ರಾಮ ಕೃಷ್ಣರು ಹೇಳುತ್ತಾರೆ "ಉಪ್ಪಿನ ಬೊಂಬೆಯೊಂದು ಸಮುದ್ರದ ಆಳ ಕಂಡುಹಿಡಿಯಲು ಹೋಯಿತು. ಇಳಿಯೋದೇ ತಡ ಕರಗಿಹೋಯಿತು. ಸಮುದ್ರದ ಆಳ ಎಷ್ಟು ಎಂಬುದನ್ನು ತಿಳಿಸು ವುದಕ್ಕೆ ಉಳಿದುಕೊಂಡಿರೋರು ಯಾರು?" (ವ.ವೇ. ಪು. ೫೨. ಪ್ರ). ಇದೇ ಶಬ್ದ ಚಿತ್ರವನ್ನು ಅಲ್ಲಮಪ್ರಭುವೂ ಬಳಸು ತ್ತಾರೆ "ವಾರಿಕಲ್ಲ ಪುತ್ಥಳಿ ವಾರಿಧಿಯನಪ್ಪಿಕೊಂಡಂತಾಯಿತ್ತು" (ವ. ೯.೧೩). (ಹಿಮದ ಅಥವಾ ನೀರ್ಗಲ್ಲಿನ ಬೊಂಬೆ, ಸಮುದ್ರವನ್ನು ಅಪ್ಪಿಕೊಂಡ ಹಾಗಾಯಿತು). ಈ ಅನುಭವವನ್ನು ಯಾವ ಹೋಲಿಕೆಯ ಮೂಲಮಾನದಿಂದಲೂ ವರ್ಣಿಸಲು ಸಾಧ್ಯವಿಲ್ಲ, "ಉಪಮೆ ಉಪಮಿಸಲರಿಯದೆ ಉಪಮಾತೀತ ವೆನುತಿದ್ದಿತು" (ಅಲ್ಲಮ. ವ. ೬೫೨).

ಇದು ಬ್ರಹ್ಮಾನುಭವದ ತುರೀಯಾವಸ್ಥೆ, ವಾಸ್ತವವಾಗಿ ಅದು 'ಅರೂಪ' ಅಥವಾ 'ನಿರಾಕಾರ'ವಾದದ್ದು. ಆದರೆ ಇದರಂತೆ ಆ ಬ್ರಹ್ಮ 'ಸಾಕಾರ'ವೆಂಬುದೂ ಅಷ್ಟೇ ಸತ್ಯ. ವಾಸ್ತವವಾಗಿ ಸಾಕಾರ ನಿರಾಕಾರಗಳು ವಿರುದ್ಧ ಸ್ಥಿತಿಗಳು. ಈ ಎರಡೂ ಏಕಕಾಲಕ್ಕೆ ಸತ್ಯವಾಗಿರಲು ಸಾಧ್ಯವೆ ಎಂಬ ಶಂಕೆ ಅನೇಕ ಜಿಜ್ಞಾಸುಗಳಿಗೆ. ರಾಮಕೃಷ್ಣರು ಹೇಳುತ್ತಾರೆ: "ತಿಳಿದುಕೊ– ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೋ ಅದರಲ್ಲಿ ದೃಢ ಬುದ್ಧಿ ಇಡು" (ವ.ವೇ.ಪು.೮.ಪೂ.). "ಭಾವಿಸಿಕೋ, ಪರಬ್ರಹ್ಮ ದಡವೇ ಇಲ್ಲದ ಸಚ್ಚಿದಾನಂದ ಸಾಗರ ಅಂತ. ಭಕ್ತಿಯ ಶೈತ್ಯದ ದೆಸೆಯಿಂದ ಅಲ್ಲಲ್ಲಿ ನೀರು ಗಡ್ಡೆ ಕಟ್ಟುತ್ತದೆ – ಹಿಮಗಡ್ಡೆಯಾಗುತ್ತದೆ. ಎಂದರೆ ಭಗವಂತ ತನ್ನ ಭಕ್ತರ ಸಲುವಾಗಿ ವ್ಯಕ್ತನಾಗಿ ಆಗಾಗ ಸಾಕಾರ ರೂಪ ಧರಿಸುತ್ತಾನೆ. ಜ್ಞಾನಸೂರ್ಯ ಉದಯಿಸಿದನೆಂದರೆ ಆ ಹಿಮ ಗಡ್ಡೆ ಕರಗಿಹೋಗುತ್ತದೆ. ಆಗ ಭಗವಂತ ಸಾಕಾರ ಅಂತ ಮನಸ್ಸಿಗೆ ಅನ್ನಿಸುವುದೇ ಇಲ್ಲ." (ವ.ವೇ. ಪು. ೧೩೭, ಪೂ: ಪು.೨೨೪ ಪೂ ; ಪು.೨೬೭–೬೮; ಪೂ.೬೫೨ ಉತ್ತ.). ಮಹಾನುಭಾವಿಯಾದ ಶ್ರೀರಾಮಕೃಷ್ಣರು ಸಾಕಾರದಿಂದ

ನಿರಾಕಾರಕ್ಕೆ, ನಿರಾಕಾರದಿಂದ ಸಾಕಾರಕ್ಕೆ ಸಂಚರಿಸಬಲ್ಲವರಾಗಿದ್ದರು. ಅವರ ಪಾಲಿಗೆ ದಕ್ಷಿಣೇಶ್ವರದ ಕಾಳಿಯೇ ಬ್ರಹ್ಮ. ಯಾವುದನ್ನು ವೇದಾಂತಿಗಳು ಬ್ರಹ್ಮ ಅನ್ನುತ್ತಾರೋ ಅದನ್ನೇ ರಾಮಕೃಷ್ಣರು ತಾಯಿ ಎಂದು ಕರೆಯುತ್ತಾರೆ (ವ.ವೇ. ಪು. ೬೧ ಪೂ.). ಆಶ್ಚರ್ಯದ ಸಂಗತಿ ಎಂದರೆ ಶಿವಶರಣರದೂ, ಭಗವಂತನ ಸ್ವರೂಪವನ್ನು ಕುರಿತು ಇದೇ ಅಭಿಪ್ರಾಯವಾಗಿದೆ. ಅವರು ಸಾಕಾರ ನಿರಾಕಾರ ಎರಡನ್ನೂ ಒಪ್ಪುತ್ತಾರೆ. ಆದರೆ ಅವರ 'ಸಾಕಾರ'ದ ಕಲ್ಪನೆ ಪುರಾಣೋಕ್ತವಾದ ಮೂರ್ತಿಕಲ್ಪನೆಗೆ ಹೊಂದುವಂಥದಲ್ಲ (ಅಕ್ಕಮಹಾದೇವಿಯೊಬ್ಬಳನ್ನು ಹೊರತುಪಡಿಸಿ). ಶಿವಶರಣರು ಕಲ್ಪಿಸಿಕೊಂಡ 'ಇಷ್ಟಲಿಂಗ' ಅನ್ನುವುದು ವಾಸ್ತವವಾಗಿ 'ಮೂರ್ತಿ' ಅಲ್ಲ; ಅದು ನಿರಾಕಾರಕ್ಕೆ ಸಮೀಪವಾದ ಒಂದು ಸಂಕೇತ. ಈ 'ಸಂಕೇತ ಸಾಕಾರ' ಎಷ್ಟು ನಿಜವೋ, ಅದರ ಮೂಲಕ ಅವರು ತಲುಪುವ 'ಬಯಲು' ಎಂಬ ನಿರಾಕಾರದ ಅನುಭವವೂ ಅಷ್ಟೇ ನಿಜ. ಬಸವಣ್ಣನವರು ಒಂದೆಡೆ 'ಬಯಲ ರೂಪ ಮಾಡಬಲ್ಲಾತನೇ ಶರಣನು. ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ' (ವ. ೯೨೨) ಎನ್ನುತ್ತಾರೆ. ಎಂದರೆ ಭಗವಂತನ 'ನಿರಾಕಾರ'ಕ್ಕೆ ಒಂದು ಆಕಾರವನ್ನು (ರೂಪ) ಕಲ್ಪಿಸುವವನು ಶರಣ ಅಥವಾ ಅನನ್ಯ ಸಮರ್ಪಣ ಭಾವದ ಭಕ್ತ. ಆ ರೂಪವನ್ನು (ಸಾಕಾರವನ್ನು) ಮತ್ತೆ ಬಯಲ ಮಾಡಬಲ್ಲಾತ, ಎಂದರೆ ನಿರಾಕಾರ ಸ್ಥಿತಿಯಲ್ಲಿ ಕಾಣಬಲ್ಲವನು ಲಿಂಗಾನುಭಾವಿ ಅಥವಾ ಜ್ಞಾನಿ. ಅಕ್ಕ ಮಹಾದೇವಿ ಈ ಬಗ್ಗೆ 'ತಿಳಿದುಪ್ಪಕ್ಕೆ ಗಟ್ಟಿದುಪ್ಪಕ್ಕೆ ಭೇದ ಉಂಟೆ?' (ವ. ೧೧೫೫) ಎಂದು ಪ್ರಶ್ನಿಸುತ್ತಾಳೆ. ತುಪ್ಪವು ಬಿಸಿಗೆ ಕರಗಿದಾಗ ಅದು ತಿಳಿಯಾಗಿ ಅಥವಾ ನಿರಾಕಾರವಾಗಿರುತ್ತದೆ; ಗಟ್ಟಿಯಾದಾಗ ಅದು ಆಕಾರದಲ್ಲಿ ಗೋಚರಿಸುತ್ತದೆ. 'ವಾರಿ ಬಲಿದು ವಾರಿಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು' (ವ. ೭೪೬) ಎಂದು ಅಲ್ಲಮಪ್ರಭು ಹೇಳುವ ಮಾತು, ನೀರೇ ಶೈತ್ಯದಿಂದ ಗಟ್ಟಿಯಾಗಿ ಹಿಮಗಡ್ಡೆಯಾಗುವಂತೆ, ಆ ಶೂನ್ಯವೇ ಸ್ವಯಂಭು ಮೂರ್ತಿಯಾಗಿ ಕಾಣುತ್ತದೆ ಎಂಬ ಉಕ್ತಿ ರಾಮಕೃಷ್ಣರ ಉಕ್ತಿಗೆ ಅತ್ಯಂತ ಸಂವಾದಿಯಾಗುತ್ತದೆ. ಸಿದ್ಧರಾಮ ತನ್ನ ವಚನದಲ್ಲಿ :

> ಸಕ್ಕರೆ ಆಕಾರ, ರುಚಿಯು ನಿರಾಕಾರ
> ಬೆಣ್ಣೆ ಆಕಾರ, ಘೃತ ನಿರಾಕಾರ
> ಆಕಾರ ಬಿಟ್ಟು ನಿರಾಕಾರವಿಲ್ಲ
> ನಿರಾಕಾರ ಬಿಟ್ಟು ಆಕಾರವಿಲ್ಲ.

ಎನ್ನುತ್ತಾನೆ. ಆಕಾರ ಹಾಗೂ ನಿರಾಕಾರ ಎರಡೂ ಸತ್ಯವಾದ ಮೇಲೆ ಭಕ್ತನಾದವನು ಯಾವುದೇ ಒಂದರಲ್ಲಿ ದೃಢವಾದ ವಿಶ್ವಾಸವನ್ನಿರಿಸಿಕೊಂಡರೆ ಸಾಕು. ರಾಮಕೃಷ್ಣರು ಹೇಳುತ್ತಾರೆ: "ವ್ಯಾಕುಲತೆಯಿಂದ, ಸಾಕಾರವಾದಿಗಳ ಮಾರ್ಗದಲ್ಲಾದರೂ ಹೋಗು, ನಿರಾಕಾರಿಗಳ ಮಾರ್ಗದಲ್ಲಾದರೂ ಹೋಗು, ಕಜ್ಜಾಯವನ್ನು ಉದ್ದುದ್ದವಾಗಿ ಕಡಿದು ತಿಂದರೂ ಸಿಹಿ, ಅಡ್ಡಡ್ಡಲಾಗಿ ತಿಂದರೂ ಸಿಹಿ" (ವ.ವೇ. ಪು. ೬೪೯ ಉತ್ತ.). ಇದೇ ಮಾತನ್ನು ಪ್ರಭು ಹೇಳುವ "ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು ಎಲ್ಲಿ ಚುಂಬಿಸಿದರೂ ಇನಿದಹುದು"– ಎಂಬ ಮಾತಿನ ಜತೆ ಹೋಲಿಸಿ ನೋಡಬಹುದು. ಭಗವಂತನ ಸಾಕಾರ ಹಾಗೂ ನಿರಾಕಾರ ಕಲ್ಪನೆಗಳನ್ನು ಕುರಿತು, ಶಿವಶರಣರಿಗೂ ರಾಮಕೃಷ್ಣರಿಗೂ ಇರುವ ಸಾಮ್ಯ ತುಂಬ ಕುತೂಹಲಕಾರಿಯಾಗಿದೆ.

ಶ್ರೀರಾಮಕೃಷ್ಣರು "ಭಕ್ತರೆಲ್ಲರೂ ಒಂದೇ ಜಾತಿಗೆ ಸೇರಿದವರು" ಎಂದು ಹೇಳುವುದರ ಮೂಲಕ ಜಾತೀಯತೆಯನ್ನು ವಿರೋಧಿಸುತ್ತಾರೆ. "ಜಾತಿಭೇದವನ್ನು ಒಂದು ವಿಧದಿಂದ ತೆಗೆದು ಹಾಕಬಹುದು. ಆ ಮಾರ್ಗವೇ ಭಕ್ತಿ. ಭಕ್ತರಿಗೆ ಜಾತಿ ಎಂಬುದೇ ಇಲ್ಲ" ( ವ.ವೇ. ಪುಟ ೧೫೧ ಪೂ.). ಅಷ್ಟೇ ಅಲ್ಲ, "ಭಕ್ತರೆಲ್ಲರೂ ಒಂದೇ ಜಾತಿಗೆ ಸೇರಿದವರು. ಅವರಲ್ಲಿ ಯಾವ ಭೇದಭಾವನೆಯೂ ಇರೋದಿಲ್ಲ" (ವ.ವೇ.ಪು. ೨೫೮ ಉತ್ತ.) ಎನ್ನುತ್ತಾರೆ. ಹನ್ನೆರಡನೆಯ ಶತಮಾನದ ಶಿವಶರಣರು ನೆಲೆಗೊಳಿಸಿದ ಧರ್ಮದೊಳಕ್ಕೆ ಅಂದಿನ ಸಮಾಜದ ವಿವಿಧ ಸ್ತರಗಳವರು, ಅಂತ್ಯಜರು ಸಹಿತ ಪ್ರವೇಶ ಪಡೆದು ಒಂದು ದೊಡ್ಡ ಸಾಮಾಜಿಕ–ಧಾರ್ಮಿಕ ಕ್ರಾಂತಿ ನಡೆದದ್ದು ಒಂದು ಅಭೂತಪೂರ್ವ ಪ್ರಸಂಗವೇ ಸರಿ.

ವೇದಶಾಸ್ತ್ರಾದಿ ಪಾಂಡಿತ್ಯದಿಂದ ಬ್ರಹ್ಮಜ್ಞಾನ ಹೇಗೆ ದೊರೆಯದೋ ಹಾಗೆಯೇ ಲೋಕಕಲ್ಯಾಣದ ಹೆಸರಿನಲ್ಲಿ ಮಾಡುವ ನಿಷ್ಕಾಮವಲ್ಲದ ದಾನಧರ್ಮಾದಿ ಪರೋಪಕಾರಗಳಿಂದ ಪುಣ್ಯಸಂಪಾದನೆಗಾಗಿ, ಅರ್ಥ ಕೀರ್ತಿ ಪ್ರತಿಷ್ಠೆಗಳಿಗಾಗಿ ಮಾಡುವ ಕರ್ಮಯೋಗದಿಂದ ಕೂಡಾ ಆ ಬ್ರಹ್ಮತ್ವ ಸಾಧ್ಯವಾಗುವುದಿಲ್ಲ – ಎಂದು ರಾಮಕೃಷ್ಣರು ಹೇಳುತ್ತಾರೆ. ಶಂಭು ಮಲ್ಲಿಕನೆಂಬ ಹಣವಂತ ಭಕ್ತನ ಜತೆ ಅವರು ಮಾತನಾಡುವಾಗ ಈ ವಿಷಯವನ್ನು ಸ್ಪಷ್ಟಪಡಿಸುತ್ತಾರೆ. ಶಂಭು ಮಲ್ಲಿಕನಿಗೆ ಡಿಸ್ಪೆನ್ಸರಿ, ಸ್ಕೂಲು, ರಸ್ತೆ, ಕೊಳ ಇತ್ಯಾದಿಗಳನ್ನು ಕಟ್ಟಿಸುವ ಹಂಬಲ. ನಿಜವಾದ ಭಕ್ತನಾದವನು ಇಂಥ ಲೋಕೋಪಯೋಗಿ ಕಾರ್ಯಗಳಲ್ಲಿ ಮೊದಮೊದಲು ನಿಷ್ಕಾಮ ಬುದ್ಧಿಯಿಂದಲೇ ತೊಡಗಿದರೂ, ಯಾವಾಗಲೋ ಅದು 'ಸಕಾಮಕರ್ಮ' ವಾಗಿಬಿಡುವ ಅಪಾಯವಿದೆ. ಈ ಹಿನ್ನೆಲೆಯಲ್ಲಿ ರಾಮಕೃಷ್ಣರು ಶಂಭು ಮಲ್ಲಿಕನಿಗೆ ಹೇಳುತ್ತಾರೆ: "ಭಾವಿಸಿಕೋ, ಭಗವಂತ ನಿನ್ನ ಸಮ್ಮುಖಕ್ಕೆ ಬಂದಿದ್ದಾನೆ; ಬಂದವನು ನಿನಗೆ ಹೇಳುತ್ತಿದ್ದಾನೆ, ನನ್ನಿಂದ ಒಂದು ವರ ಪಡೆದುಕೋ; ಆಗ ನೀನು 'ಹೇ ಭಗವಂತ, ನನಗೆ ಕೆಲವು ಆಸ್ಪತ್ರೆ ಡಿಸ್ಪೆನ್ಸರಿಗಳನ್ನು ಕಟ್ಟಿಸಿಕೊಡು' ಎಂದು ಬೇಡುವೆಯೋ, ಅಥವಾ ' ಹೇ ಭಗವಂತ, ನಿನ್ನ ಪಾದಪದ್ಮಗಳಲ್ಲಿ ಶುದ್ಧಭಕ್ತಿ ಉಂಟಾಗುವಂತೆ ಕರುಣಿಸು' ಎಂದು ಬೇಡುವೆಯೊ, ಮೊದಲು

ಆತನ ಸಾಕ್ಷಾತ್ಕಾರ ಪಡೆದುಕೊಂಡುಬಿಟ್ಟಿದ್ದೇ ಆದರೆ. ಬಳಿಕ ಆತನಿಗೆ ಇಚ್ಛೆಯಿದ್ದರೆ, ಆತ ನಮ್ಮ ಮೂಲಕ ಅನೇಕ ಆಸ್ಪತ್ರೆ, ಡಿಸ್ಪೆನ್ಸರಿಗಳನ್ನು ಕಟ್ಟಿಸಿಕೊಳ್ಳಬಲ್ಲ" (ವ.ವೇ.ಪು.೭೨೬ ಪ್ರ: ಪು.೪೮೧ ಉತ್ತ.) ಅಂದರೆ ರಾಮಕೃಷ್ಣರು ಈ ಬಗೆಯ ಲೋಕೋಪಯೋಗಿ ಕರ್ಮಗಳಲ್ಲಿ ತೊಡಗಬೇಡಿ ಎಂದೂ, ಇವು ಬೇಕಾಗಿಲ್ಲ ಎಂದೂ ಹೇಳಿದರೆಂದು ಅರ್ಥವಲ್ಲ; ಮೊದಲು ಒಂದು ನಿಷ್ಕಾಮ ಮನೋಧರ್ಮವನ್ನು ಸಾಧನೆಯ ಮೂಲಕ ಗಳಿಸಿಕೊಂಡು, ಅನಂತರ ಇಂತಹ ಕಾರ್ಯಗಳಲ್ಲಿ ತೊಡಗಬೇಕೆಂಬುದು ಅವರ ಮಾತಿನ ಅರ್ಥ. ಹನ್ನೆರಡನೆಯ ಶತಮಾನದ ಸಿದ್ಧರಾಮ ಒಬ್ಬ ಮಹಾಭಕ್ತ. ಆತ ಇಂದು ಸೊಲ್ಲಾಪುರವೆಂದು ಕರೆಯಲಾಗುವ ಸ್ಥಳದಲ್ಲಿ ಇದ್ದುಕೊಂಡು ಕೆರೆ ಬಾವಿ ದೇವಾಲಯಗಳನ್ನು ಕಟ್ಟಿಸುವುದು, ಸಾಮೂಹಿಕ ಮದುವೆಗಳನ್ನು ಮಾಡಿಸುವುದು ಇತ್ಯಾದಿ 'ಕರ್ಮಯೋಗ' ದಲ್ಲಿ ತೊಡಗಿದವನು. ಒಮ್ಮೆ ಅಲ್ಲಮಪ್ರಭು ಆತನನ್ನು ಕಂಡಾಗ ಅಂತಹ ದೊಡ್ಡ ಭಕ್ತ ಹೀಗೆ ಜನೋಪಯೋಗಿಯಾದ ಕರ್ಮಗಳಲ್ಲಿ ತೊಡಗಿ ತನ್ನ ನಿಜವಾದ ಸಾಧನೆಯ ಹಾದಿಯಿಂದ ವಿಮುಖನಾಗುತ್ತಿದ್ದಾನಲ್ಲ ಅನ್ನಿಸಿ ಆತನಿಗೆ ಒಂದು ಮಾತನ್ನು ಹೇಳುತ್ತಾರೆ:

ಅನ್ನವನ್ನಿಕ್ಕಿ ನನ್ನಿಯ ನುಡಿದು ಅರವಟ್ಟಿಗೆಯನಿಕ್ಕಿ
ಕೆರೆಯ ಕಟ್ಟಿಸಿದರೆ, ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಲುವು ಸಾಧ್ಯವಾಗದು.
ಗುಹೇಶ್ವರನನರಿಯದ ಶರಣಂಗೆ ಆವ ಫಲವೂ ಇಲ್ಲ. (ವ. ೬೩೯)

ಶ್ರೀರಾಮಕೃಷ್ಣರಿಗೂ ಶಿವಶರಣರು ಅಥವಾ ವಚನಕಾರರಿಗೂ ಇರುವ ಅಂತರ ಎಂಟುನೂರು ವರ್ಷಗಳಿಗೂ ಮೀರಿದ್ದು. ಶಿವಶರಣರು ಬಾಳಿಬದುಕಿದ್ದು ದಕ್ಷಿಣದ ಕರ್ನಾಟಕದಲ್ಲಿ; ರಾಮಕೃಷ್ಣರು ಇದ್ದುದು ಉತ್ತರದ ಬಂಗಾಳದಲ್ಲಿ. ಆದರೂ ಈ ಅನುಭಾವಿಗಳ, ಅನುಭವಸಾಮ್ಯ ಆಶ್ಚರ್ಯಗೊಳಿಸುವಂಥದ್ದು. ರಾಮಕೃಷ್ಣರು ಮೇಲೆ ನೋಡಲು, ಕೇವಲ ಅನುಭಾವಿಯ ಸ್ತರದಲ್ಲೇ ಇರುವಂತೆ ಕಂಡರೂ, ಅವರ ಲೋಕಾನುಕಂಪೆ, ಅವರ ಸಾಮಾಜಿಕ ಕಳಕಳಿ ಇತ್ಯಾದಿಗಳೆಲ್ಲ ಇಂದು ಅವರ ಶಿಷ್ಯಕೋಟಿಯ ಮಹತ್ಕಾರ್ಯಗಳ ಮೂಲಕ ಹಾಗೂ ಶ್ರೀರಾಮಕೃಷ್ಣ ಆಶ್ರಮವೆಂಬ ಸಂಸ್ಥೆಯ ಮೂಲಕ ಜಗತ್ತಿನಾದ್ಯಂತ ಸುಪ್ರಕಟವಾಗಿದೆ. ಪುರೋಹಿತಶಾಹಿ ಪ್ರವೃತ್ತಿಯ ವಿರುದ್ಧವಾಗಿ ಬಂಡೆದ್ದ ವಚನಕಾರರ ಮನೋಧರ್ಮ, ಸಾಮಾಜಿಕ ಅಸಮತೆ ಹಾಗೂ ವಿಷಮತೆಗಳನ್ನು ಕುರಿತು ಅವರು ಮಾಡಿದ ವಿಮರ್ಶೆ ಇತ್ಯಾದಿಗಳು ಮತ್ತೆ ಈ ಯುಗದಲ್ಲಿ ಮೊಳಗಿದ್ದರೆ, ಅದು ರಾಮಕೃಷ್ಣರ ಶಿಷ್ಯೋತ್ತಮ ಸ್ವಾಮಿ ವಿವೇಕಾನಂದರ ಮೂಲಕವೇ.

ಶ್ರೀ ರಾಮಕೃಷ್ಣರು "ಮತಗಳೆಲ್ಲ ಕೇವಲ ಪಥಗಳು" ಎಂದು ಸಾರಿದವರು. "ದೇವನೊಬ್ಬ ನಾಮ ಹಲವು" (ವ.೬೧೩) "ಹುತ್ತಕ್ಕೆ ಏಸು ಬಾಯಾದರೇನು, ಸರ್ಪನಿಪ್ಪುದು ಒಂದೇ ಸ್ಥಾನ" (ವ. ೯೫೧)–ಎಂದು ಬಸವಣ್ಣನವರು ಹೇಳಿದರೂ. ಅವರ ಮೊದಲ ಗುರಿ ಒಂದು ಹೊಸ ಮತ–ಧರ್ಮವನ್ನು ಕಟ್ಟುವುದಾಗಿತ್ತು. ಹನ್ನೆರಡನೆಯ ಶತಮಾನದಷ್ಟು ಹಿಂದೆ ಧರ್ಮದ ವರ್ಣವ್ಯವಸ್ಥೆಯನ್ನು ಪ್ರತಿಭಟಿಸಿ, ಮನುಷ್ಯರೆಲ್ಲರನ್ನೂ ಸಮಾನತೆಯ ಸಾಮಾಜಿಕ ಧಾರ್ಮಿಕ ವ್ಯವಸ್ಥೆಯೊಂದರೊಳಕ್ಕೆ ತರಲು ಅವರು ಪ್ರಯತ್ನಿಸಿದ್ದು ನಿಜವಾಗಿಯೂ ಮಹತ್ವದ ಸಾಧನೆಯಾಗಿದೆ. ಆದರೆ ಶ್ರೀರಾಮಕೃಷ್ಣರು ಯಾವುದೇ ಮತ–ಧರ್ಮದ ಸ್ಥಾಪಕರಲ್ಲ; ಅವರು ಸರ್ವಧರ್ಮಗಳನ್ನೂ ಸಾಕ್ಷಾತ್ಕರಿಸಿಕೊಂಡು, ಎಲ್ಲ ಧರ್ಮದ ತಿರುಳೂ ಒಂದೇ ಎಂಬುದನ್ನು ಸ್ಥಾಪಿಸಿದವರು. ಈ ದೃಷ್ಟಿಯಿಂದ ಶ್ರೀರಾಮಕೃಷ್ಣರನ್ನು ಕೇವಲ ಹಿಂದೂ ಧರ್ಮದ ಪ್ರತಿನಿಧಿ ಎಂದು ಭಾವಿಸುವುದು ಸರಿಯಾದದ್ದಲ್ಲ. **ಹಿಂದೂ ಧರ್ಮದ ನೆಲೆಯಲ್ಲಿ ನಿಂತು, ಜಗತ್ತಿನ ಎಲ್ಲ ಧರ್ಮಗಳನ್ನೂ, ಆಯಾ ಧರ್ಮದ ಸಾಧನ ವಿಧಾನಗಳ ಮೂಲಕವೇ ತಮ್ಮ ಅನುಭವದಲ್ಲಿ ಸಾಕ್ಷಾತ್ಕರಿಸಿಕೊಂಡು, ಎಲ್ಲ ಧರ್ಮಗಳೂ ಆ ವಿಶ್ವಧರ್ಮದ ತರಂಗಗಳು ಎಂಬ ಮಹಾಸತ್ಯವನ್ನು ಕಂಡುಕೊಂಡದ್ದು ಜಗತ್ತಿನ ಧಾರ್ಮಿಕ ಇತಿಹಾಸದಲ್ಲೇ ಅಪೂರ್ವವಾದದ್ದು, ಅವರನ್ನು ಈ ಕಾರಣದಿಂದ 'ಸರ್ವ ಧರ್ಮ ಸಮನ್ವಯಾಚಾರ್ಯ' ರೆಂದು ಸ್ತುತಿಸುವುದು ಉತ್ಪ್ರೇಕ್ಷೆಯಲ್ಲ.**

---

*ಈ ಲೇಖನದಲ್ಲಿ ಉಲ್ಲೇಖಗಳನ್ನು ಬಳಸಿಕೊಂಡ ಗ್ರಂಥಗಳು*


೧. **ಶ್ರೀರಾಮಕೃಷ್ಣ ವಚನವೇದ;** (ಪೂರ್ವಾರ್ಧ) ಪ್ರಥಮ ಮುದ್ರಣ ೧೯೫೬, ಪ್ರ : ಶ್ರೀ ರಾಮಕೃಷ್ಣಾಶ್ರಮ. ಮೈಸೂರು.

೨. **ಶ್ರೀರಾಮಕೃಷ್ಣ ವಚನವೇದ:** (ಉತ್ತರಾರ್ಧ) ಪ್ರಥಮ ಮುದ್ರಣ ೧೯೫೬, ಪ್ರ : ಶ್ರೀ ರಾಮಕೃಷ್ಣಾಶ್ರಮ. ಮೈಸೂರು.

೩. **ಅಲ್ಲಮನ ವಚನ ಚಂದ್ರಿಕೆ:** ಸಂ. ಡಾ. ಎಲ್. ಬಸವರಾಜು. ೧೯೬೦. ಪ್ರ : ನಳಿನೀ ಶಂಕರ ಪ್ರಕಾಶನ, ಮೈಸೂರು.

೪. **ಬಸವಣ್ಣನವರ ಷಟ್‌ಸ್ಥಲದ ವಚನಗಳು:** ಸಂ. ಪ್ರೋ. ಶಿ.ಶಿ. ಬಸವನಾಳ, ೧೯೫೪, ಪ್ರ : ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ. ಧಾರವಾಡ.

೫. **ಶಿವಶರಣೆಯರ ವಚನಗಳು:** ಸಂ. ಡಾ. ಆರ್.ಸಿ. ಹಿರೇಮಠ, ೧೯೬೮, ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. **ಸಕಲ ಪುರಾತನ ವಚನಗಳು:** ಸಂ. ಡಾ. ಆರ್.ಸಿ. ಹಿರೇಮಠ, ೧೯೬೨, ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. **ಸಿದ್ಧರಾಮೇಶ್ವರ ವಚನಗಳು.** ಸಂ. ಡಾ. ಆರ್.ಸಿ. ಹಿರೇಮಠ, ೧೯೬೮, ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.